ಶ್ರೀ ಜೆ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ.

ರಸ್ತೆ ಬದಿಗಳಲ್ಲಿ ಗಿಡ ನೆಡುವ ಬಗ್ಗೆ ವಿವರಗಳು

೪೦೫ ಶ್ರೀಮತಿ ಲೀಲಾವತಿ ಆರ್. ಪ್ರಸಾದ್(ಅಥಣಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿರುವ ರಸ್ತೆಗಳ ಅಕ್ಕಪಕ್ಕದಲ್ಲಿ ಎಷ್ಟು ಗಿಡಗಳನ್ನು ಹೊಸದಾಗಿ ನೆಡಲಾಗಿದೆ ಹಾಗೂ ಎಷ್ಟು ಗಿಡಗಳನ್ನು ರಸ್ತೆ ಅಗಲ ಮಾಡುವಾಗ ಕಡಿಯಲಾಗಿದೆ ?

ಆ) ಹೊಸದಾಗಿ ನೆಟ್ಟ ಗಿಡಗಳು ಯಾವ ಜಾತಿಯವು ಹಾಗೂ ಎಷ್ಟು ವಯಸ್ಸಿನವು ?

ಇ) ಗಿಡಗಳನ್ನು ನೆಡುವ ಬಗ್ಗೆ ಯಾವ ನೀತಿಯನ್ನು ಅನುಸರಿಸಲಾಗುತ್ತಿದೆ ?

ಶ್ರೀ ಜೆ.ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಕಳೆದ ೩ ವರ್ಷಗಳಲ್ಲಿ ೪೫೨೦೬೧೧ ಸಸಿಗಳನ್ನು ಹೊಸದಾಗಿ ನೆಡಲಾಗಿದ್ದು, ೫೬೩೦ ಗಿಡಗಳನ್ನು ಕಡಿಯಲಾಗಿದೆ.

ಆ) ಹೊಸದಾಗಿ ನೆಟ್ಟ ಗಿಡಗಳು ಹಣ್ಣಿನಹಂಪಲು ಬಿಡುವಂತಹ ನೆರಳು ಹಾಗೂ ಸೌದೆ ಕೊಡುವಂತಹವುಗಳಾಗಿರುತ್ತವೆ. ವಿವರ ಕೆಳಕಂಡಂತಿದೆ.–

ಬೇವು, ನೇರಳೆ, ಹುಣಸೆ, ಫೆಲ್ಟೊಫಾರಂ, ಗುಲ್ - ಮೊಹರ್, ಮಾವು, ಹೊಂಗೆ ಜಕರಾಂಡ, ಬಹುನಿಯ, ಸಿಲ್ವರ್ ಓಕ್, ದೂಡ ಸ್ಪೇತೋಡಿಯಾ, ಹಲಸು ಬಾಗೆ, ಬಸವನಪಾದ, ಮಹಾಗನಿ, ಹೆಬ್ಬಲಸು, ರೈನ್‌ಟ್ರೀ, ಹಿಪ್ಪೆ, ಸಿಸ್ಸು, ಬಾದಾಮಿ, ಬಿಲ್ವಪತ್ರೆ, ನೀಮ್ ಫ್ಲವರ್, ದೇವದಾರು, ಸೀಮೆತಂಗಡಿ, ಅಂಟ್ವಾಳ, ಬಳಂಜಿ, ಆಕೇಶಿಯಾ ನಿಯೋಟಿಕ, ಆಕೇಶಿಯಾ, ಆರ್ಕಲಿಪಾರ್ಮಿನ್, ಯುಕಲಿಪ್ಟಸ್, ಜಿಪಾನಿಕ, ಕ್ಯಾಸುರೀನ, ಜಾಲಿ ಗುಲ್ಮರ, ಪೆಬ್ಬೇವು ಹಾಗೂ ಉರುವಲಿಗೆ ಉಪಯುಕ್ತವಾದ ಸಸಿಗಳನ್ನು ಸಹ ನೆಡಲಾಗುತ್ತಿದೆ. ಮೇಲ್ಕಂಡ ಸಸಿಗಳು ೧ ವರ್ಷದಿಂದ ೩ ವರ್ಷದವುಗಳಾಗಿರುತ್ತವೆ.

ಇ) ರಸ್ತೆ ಎರಡು ಬದಿಗಳಲ್ಲಿ ಗುಂಡಿ ತೆಗೆದು ಗಿಡಗಳನ್ನು ನೆಡಲಾಗಿದೆ. ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ರಸ್ತೆಗಳಲ್ಲಿ ಗುಣಿ ಮೆಥೆಡ್ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ರಸ್ತೆಗಳಲ್ಲಿ ಟ್ರೆಂಚಿಂಗ್ ಮತ್ತು ಫಿಟ್ಟಿಂಗ್ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ಸಸಿಗಳನ್ನು ಒಂದು ಸಸಿಯಿಂದ ಇನ್ನೊಂದು ಸಸಿಗೆ ೧೦ ಮೀ ಅಂತರವಿರುವಂತೆ ೬೦ ಸೆ.ಮೀ ಗುಣಗಳಲ್ಲಿ ಒಂದು ವರ್ಷದಿಂದ ೩ ವರ್ಷಗಳವರೆಗೆ ಬೆಳಿಸಿರುವ ಎತ್ತರದ ಸಸಿಗಳನ್ನು ನೆಟ್ಟು ಅವುಗಳಿಗೆ ಮುಳ್ಳಿನ ಬೇಲಿ ಕಟ್ಟಿ ಪೋಷಿಸಲಾಗುತ್ತಿದೆ. ಈ ಪ್ರಮುಖ ಸಸಿಗಳ ಮಧ್ಯೆ ಮತ್ತು ಅಜೂಬಾಜೂ ಇರುವ ಜಾಗದಲ್ಲಿ ೫೦ ಸೆ.ಮೀ ಗುಂಡಿಗಳನ್ನು ಹಾಗೂ ೪×೦.೫×೦.೫ ಎಂ ಕಂದಕಗಳನ್ನು ತೆಗೆದು ಒಂದು ವರ್ಷದ ಉರುವಲು ಜಾತಿಯ ಸಸಿಗಳನ್ನು ನೆಟ್ಟು ಪೋಷಿಸಲಾಗುತ್ತಿದೆ.

ಬನಹಟ್ಟಿಯಲ್ಲಿ ಕೆ.ಇ.ಬಿ ಯ ಉಪವಿಭಾಗ ಕಛೇರಿ ಪ್ರಾರಂಭಿಸುವ ಬಗ್ಗೆ

೭೩. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯವಿದ್ಯುತ್ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜಮಖಂಡಿ ತಾಲ್ಲೂಕಿನ ಬನಹಟ್ಟಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ವಂಡಳಿಯ ಉಪವಿಭಾಗ ಕಛೇರಿಯನ್ನು ಆರಂಭಿಸುವ ಆಲೋಚನೆ ಸರ್ಕಾರದಪರಿಗಿದೆಯೆ ?

ಅ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುಕ್ತ್ ರಾಜ್ಯ ಮಂತ್ರಿಗಳು).—

ಆ) ಮತ್ತು ಅ) ಈ ಪ್ರಸ್ತಾವನೆಯನ್ನು ಮಂಡಳಿ ಪರಿಶೀಲಿಸುತ್ತಿದೆ. ಮತ್ತು ಇದಕ್ಕೆ ಬೇಕಾದ ಮಾಹಿತಿಗಳನ್ನು ಸಂಗ್ರಹಿಸುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚಿರುವುದು

೭೮೦. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್‌ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮುಚ್ಚಿರುವ ಭಾರೀ ಮತ್ತು ಮಧ್ಯಮ ಕೈಗಾರಿಕೆಗಳೆಷ್ಟು, ಯಾವು ಯಾವು ಹಾಗೂ ಎಂದಿನಿಂದ ಮುಚ್ಚಿವೆ,

ಆ) ಮುಚ್ಚಿರುವ ಕೈಗಾರಿಕೆಗಳಿಂದ ಸರ್ಕಾರಕ್ಕಾಗಿರುವ ನಷ್ಟವೆಷ್ಟು,

ಇ) ಮುಚ್ಚಿರುವ ಕೈಗಾರಿಕೆಯಿಂದ ನಿರುದ್ಯೋಗಿಗಳಾಗಿರುವ ಕಾರ್ಮಿಕರ ಸಂಖ್ಯೆ ಎಷ್ಟು,

ಈ) ದಾವಣಗೆರೆಯಲ್ಲಿ ಮುಚ್ಚಿರುವ ಹತ್ತಿ ಗಿರಣಿಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಸಚಿವರು).

ಅ) ೩೨

(ಅನುಬಂಧದಲ್ಲಿ ವಿವರಿಸಲಾಗಿದೆ)

ಆ) ಖಚಿತವಾಗಿ ಹೇಳಲು ಸಾಧ್ಯವಿಲ್ಲ

ಇ) ೧೧೪೫೩

ಈ) ಒಟ್ಟು ಮುಚ್ಚಿರುವ ೪ ಗಿರಣಿಗಳಲ್ಲಿ ೨ ಗಿರಣಿಗಳು ಬಿಐಎಫ್‌ಆರ್‌ಗೆ ಅರ್ಜಿಯನ್ನು ಪುನಃ ಶ್ಚೇತನಕ್ಕಾಗಿ ಸಲ್ಲಿಸಿರುತ್ತಾರೆ ಮತ್ತು ಅವುಗಳು ಬಿಐಎಫ್‌ಆರ್‌ನ ಪರಿಶೀಲನೆಯಲ್ಲಿರುತ್ತದೆ. ಇನ್ನೊಂದು ಗಿರಣಿಯ ಬಗ್ಗೆ ಬ್ಯಾಂಕಿನವರು ಸವಿವರವಾದ ವರದಿಯನ್ನು ಟಿಕ್ಸ್‌ಲ್ ಸಂಸ್ಥೆಯವರು ತಯಾರಿಸಿ ಕೊಡುವಂತೆ ಕೇಳಿರುತ್ತಾರೆ, ನಾಲ್ಕನೇ ಗಿರಣಿಯ ಬಗ್ಗೆ ಪುನಃಶ್ಚೇತನ ಸಾಧ್ಯವಿಲ್ಲವೆಂದು ಹಣಕಾಸು ಸಂಸ್ಥೆಯವರು ಮನಗೂಡಿದ್ದಾರೆ.